254 ಶ್ರೀ ಅಪ್ಪಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ.
ಮಾನ್ಯ ಲೋಕೋಪಯೋಗಿ ಸಚಿವರು.

ಅ. ರಾಷ್ಟ್ರೀಯ ಹೆದ್ದಾರಿ–13ರಲ್ಲಿ ಚಿತ್ರದುರ್ಗದಿಂದ ಸೊಲ್ಲಾಪುರದವರೆಗೆ ಪ್ರತಿನಿತ್ಯ ಸಾವಿರಾರು ಅಂತರ ರಾಜ್ಯ ಬಸ್ಸುಗಳು ಹಾಗೂ ಭಾರೀ ಸರಕು ಸಾಗಾಣಿಕೆ ವಾಹನಗಳು ಸಂಚರಿಸುತ್ತಿದ್ದು, ಸುಗಮ ಸಂಚಾರಕ್ಕೆ ವ್ಯತ್ಯಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ರಾಷ್ಟ್ರೀಯ ಹೆದ್ದಾರಿ–13 ಚಿತ್ರದುರ್ಗದಿಂದ ಮಹಾರಾಷ್ಟ್ರ ಕರ್ನಾಟಕ ಗಡಿಯವರೆಗೆ ಈ ವಲಯದ ವ್ಯಾಪ್ತಿಯಾಗಿದ್ದು, ಸದರಿ ಭಾಗದ ರಸ್ತೆಯು ದ್ವಿಪಥ ರಸ್ತೆಯಾಗಿದ್ದು ಪ್ರತಿನಿತ್ಯ ಸಾವಿರಾರು ಅಂತರರಾಜ್ಯ ಬಸ್‌ಗಳು ಹಾಗೂ ಭಾರಿ ಸರಕು ಸಾಗಾಣಿಕೆ ವಾಹನಗಳು ಸಂಚರಿಸುತ್ತಿದ್ದು, ರಸ್ತೆ ಅಗಲ ಕಿರಿದಾಗಿರುವುದರಿಂದ ಸುಗಮ ಸಂಚಾರಕ್ಕೆ ವ್ಯತ್ಯಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಹಾಗಿದ್ದಲ್ಲಿ, ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಚತುಷ್ಪಥ ರಸ್ತೆ ನಿರ್ಮಿಸುವ ಯೋಜನೆ ಸರ್ಕಾರಕ್ಕಿದೆಯೇ:

–ಹೌದು–

ಕೇಂದ್ರ ಭೂಸಾರಿಗೆ ಮಂತ್ರಾಲಯ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಚಿತ್ರದುರ್ಗದಿಂದ ಮಹಾರಾಷ್ಟ್ರ–ಕರ್ನಾಟಕ ಗಡಿಯವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಮಾಡುವ ಯೋಜನೆಯನ್ನು ಹಾಕಿಕೊಂಡಿದೆ.

ಇ ಈ ಯೋಜನೆಯ ಯಾವ ಮಾದರಿಯಲ್ಲಿರುತ್ತದೆ; ಯೋಜನಾ ವರದಿ ತಯಾರಿಸಲಾಗಿದೆಯೇ; ಯೋಜನಾ ವರದಿ ಯಾವ ಹಂತದಲ್ಲಿದೆ;

ಕೇಂದ್ರ ಭೂಸಾರಿಗೆ ಮಂತ್ರಾಲಯ ಮತ್ತು **NHAI** ವ್ಯಾಪ್ತಿಗೆ ಬರುತ್ತದೆ. ಭೂಸಾರಿಗೆ ಮಂತ್ರಾಲಯದವರು ಈ ರಸ್ತೆ ನಿರ್ಮಾಣ ಕಾರ್ಯವನ್ನು **DBFO** ಮಾದರಿಯಲ್ಲಿ ತೆಗದುಕೊಳ್ಳುವ ನಿಟ್ಟಿನಲ್ಲಿ ಸಮಾಲೋಚಿಸುತ್ತಿದ್ದಾರೆ.

ಈ ಈ ಯೋಜನೆ ಅಂದಾಜು ವೆಚ್ಚ ಎಷ್ಟು?

ಯೋಜನಾ ಹಂತದಲ್ಲಿದ್ದು ಮಾಹಿತಿಗಳು ಇನ್ನೂ ಲಭ್ಯವಿರುವುದಿಲ್ಲ.

ಉ. ಈ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಯೋಜನಾ ಹಂತದಲ್ಲಿದ್ದು ಮಾಹಿತಿಗಳು ಇನ್ನೂ ಲಭ್ಯವಿರುವುದಿಲ್ಲ.

255 ಶ್ರೀ ಅಪ್ಪಾ ಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ. (ಬಿಜಾಪುರ ನಗರ)
ಮಾನ್ಯ ಮುಖ್ಯಮಂತ್ರಿಗಳು.

ಉತ್ತರಿಸಲಾಗಿದೆ

ಅ) ಐತಿಹಾಸಿಕ ಸ್ಮಾರಕಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ **(UNESCO)** ಸೇರಿಸಲು ಯಾವ ಯಾವ ಅರ್ಹತೆಗಳನ್ನು ಹೊಂದಿರಬೇಕು.

ಒಂದು ಪ್ರದೇಶದ ಸಾಂಸ್ಕೃತಿಕ ಸಂಪತ್ತಿನ ಪುರಾತನ ಅವಶೇಷಗಳ ವಾಸ್ತುಶಿಲ್ಪ, ಶಿಲ್ಪ, ವರ್ಣಚಿತ್ರಗಳ/ಭಿತ್ತ ಚಿತ್ರಗಳು ಕೋಟೆ ಕಮದಕಗಳು, ನಗರ ಯೋಜನೆ ರಕ್ಷಣಾವ್ಯೂಹ. ಧಾರ್ಮಿಕ ಕಟ್ಟಡಗಳು, ದಂಡು ಮತ್ತಿತರ ಅವಶೇಷಗಳು ಬಹು ವಿಸ್ತಾರವಾಗಿಯೂ ಅಭೂತಪೂರ್ವಕವಾಗಿಯೂ ಇದ್ದು, ವಿಶ್ವದ ಇತಿಹಾಸದಲ್ಲಿ ಇದಕ್ಕೆ ಒಂದು ಮಹತ್ವದ ಹಾಗೂ ಶಾಶ್ವತ ಸ್ಥಾನವಿರಬೇಕು. ಇಂತಹ ಸ್ಮಾರಕಗಳು/ ಪ್ರದೇಶಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸ್ಥಾನ ಪಡೆಯಲು ಅರ್ಹತೆ ಪಡೆದಿರುತ್ತವೆ.

ಆ) ರಾಜ್ಯದ ಯಾವ ಯಾವ ಐತಿಹಾಸಿಕ ಸ್ಮಾರಕಗಳು **(UNESCO)** ಪಟ್ಟಿಯಲ್ಲಿ ಸೇರಿಸಲು ಅರ್ಹತೆಯನ್ನು ಹೊಂದಿವೆ.

ಕರ್ನಾಟಕ ರಾಜ್ಯದ ಈ ಕೆಳಕಂಡ ಪ್ರದೇಶಗಳಲ್ಲಿನ ಸ್ಮಾರಕಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆ ಹೊಂದಲು ಅರ್ಹತೆ ಪಡೆದಿವೆ.

1. ಬೇಲೂರು ಹೆಳೇಬೀಡು ಸೋಮನಾಥಪುರ, ಶ್ರವಣ ಬೆಳಗೋಳ ಅರ್ಹತೆ ಪಡೆದಿವೆ.
2. ಬೃಹತ್ ಶಿಲಾ ಸಮಾಧಿ ರಚನೆಗಳ ಸಂಕೀರ್ಣ (ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಹಿರೇಬೆಣಕಲ್‌ನಲ್ಲಿರುವ ಒಂದು ಇತಿಹಾಸಪೂರ್ವ ನಿವೇಶನ)
3. ಲಕ್ಕುಂಡಿ ಮತ್ತು ಡಂಬಳದಲ್ಲಿರುವ (ಗದಗ್ ಜಿಲ್ಲೆ) ತರುವಾಯ ಚಾಲುಕ್ಯ ವಾಸ್ತು ಶಿಲ್ಪ
4. ಗುಲ್ಬರ್ಗಾ ಇಂಡೋ-ಇಸ್ಲಾಮಿಕ್ ವಾಸ್ತು ಶಿಲ್ಪ
5. ಬೀದರ್‌ನಲ್ಲಿನ ಇಂಡೋ-ಇಸ್ಲಾಮಿಕ್ ಸ್ಪಷ್ಟ ವಾಸ್ತು ಶಿಲ್ಪ
6. ಬಿಜಾಪುರದಲ್ಲಿನ ಇಂಡೋ-ಇಸ್ಲಾಮಿಕ್ ಸ್ಪಷ್ಟ ವಾಸ್ತು ಶಿಲ್ಪ

ಇ) ಬಿಜಾಪುರದಲ್ಲಿರುವ ವಿಶ್ವವಿಖ್ಯಾತ ಗೋಲಗುಮ್ಮಟ ಸ್ಮಾರಕವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲು ಸರಕಾರ ಕ್ರಮ ಕೈಗೊಂಡಿದೆಯೇ?

ಹೌದು ಕ್ರಮ ಕೈಗೊಂಡಿದೆ.

ಈ) ಹಾಗಾದರೆ ಕೈಗೊಂಡ ಕ್ರಮಗಳೇನು;

ಗೋಲಗುಮ್ಮಟ ಸ್ಮಾರಕವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಿ ಮಹಾನಿರ್ದೇಶಕರು. ಭಾರತೀಯ ಪುರಾತತ್ವ ಸರ್ವೇಕ್ಷಣ. ನವದೆಹಲಿ ಇವರಿಗೆ ದಿನಾಂಕ 16.02.02008ರಂದು ಪತ್ರ ಬರೆಯಲಾಗಿದೆ.

ಉ) ಗೋಲಗುಮ್ಮಟ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ಬಿಜಾಪುರ ನಗರದಲ್ಲಿರುವ ಗೋಲಗುಂಬಜವನ್ನು ನೋಡಲು ಬರುವ ಸಂದರ್ಶಕರಿಗಾಗಿ ಕೆಲವು ಸಾರ್ವಜನಿಕೆ ಸೌಕರ್ಯಗಳನ್ನು ಒದಗಿಸಿದೆ. ಉದಾಹರಣೆಗೆ ಕುಡಿಯುವ ನೀರು, ಶೌಚಾಲಯ ವಿಭಾಗ, ಕ್ಯಾಂಟೀನ್ ವಾಹನಗಳ ಪಾರ್ಕಿಂಗ್, ಸ್ಮಾರಕಕ್ಕೆ ಸೇರಿದ ಸೌಂದರ್ಯಯುತವಾದ ಉದ್ಯಾನವನದಲ್ಲಿ ಸಂದರ್ಶಕರಿಗಾಗಿ ಬೆಂಚುಗಳು, ಅಂಗವಿಕಲರಿಗೆ ವೀಲ್‌ಚೇರ್ ಪ್ರಕಟಣೆಗಳ ಮಾರಾಟ ಕೌಂಟರ್, ಗೈಟ್ ಸೌಕರ್ಯ, ನಿರ್ದೇಶನ ಮತ್ತು ಹೆಸರು ಫಲಕಗಳು, ಉತ್ತಮ ಮಟ್ಟದ ಆಕರ್ಷಣೀಯ ಹುಲ್ಲುಹಾಸು ಮುಂತಾದವುಗಳು,

256 ಶ್ರೀ ಅಪ್ಪಾ ಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ. (ಬಿಜಾಪುರ ನಗರ)
ಮಾನ್ಯ ಮುಖ್ಯಮಂತ್ರಿಗಳು.

ಅ) ಬಿಜಾಪುರದಲ್ಲಿರುವ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳನ್ನು ಅತಿಕ್ರಮಕಾರರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗಮನಕ್ಕೆ ಬಂದಿದೆ.

ಆ) ಎಷ್ಟು ಪ್ರದೇಶವನ್ನು: ಎಷ್ಟು ವರ್ಷಗಳಿಂದ ಅತಿಕ್ರಮಿಸಿದ್ದಾರೆ; ಅತಿಕ್ರಮಣಕಾರರು ಯಾರು ಯಾರು;

ಭಾರತೀಯ ಪುರಾತತ್ವ ಸರ್ವೇಕ್ಷಣ ಧಾರವಾಡ ವಲಯದ ರಕ್ಷಣಾ ವ್ಯಾಪ್ತಿಯಲ್ಲಿನ ಬಿಜಾಪುರದಲ್ಲಿನ 63 ರಾಷ್ಟ್ರೀಯ ಸಂರಕ್ಷಿತ ಸ್ಮಾರಕಗಳ ಪ್ರದೇಶಗಳು ವಿವಿಧ ಬಗೆಯ ಅತಿಕ್ರಮಣಕ್ಕೆ ಬಹಳ ವರ್ಷಗಳಿಂದ ಒಳಗಾಗಿವೆ. ಅತಿಕ್ರಮಣಕಾರರ ಪಟ್ಟಿಯನ್ನು ಲಗತ್ತಿಸಿದೆ.

ಇ) ಯಾವ ಯಾವ ಪ್ರದೇಶದಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗಿದೆ: ಉಳಿದ ಪ್ರದೇಶಗಳಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸದಿರಲು ಕಾರಣವೇನು;

ಅತಿಕ್ರಮಣಕ್ಕೆ ಒಳಗಾಗಿರುವ ಸ್ಮಾರಕಗಳ ಎಲ್ಲಾ ಪ್ರದೇಶಗಳಿಂದಲೂ ಅತಿಕ್ರಮಣಕಾರರನ್ನು ತೆವುಗೊಳಿಸಲು ನಿಯಮದಡಿ ಭಾರತೀಯ ಪುರಾತತ್ವ ಸರ್ವೇಕ್ಷಣವು ಕ್ರಮ ಕೈಗೊಂಡಿರುತ್ತದೆ.

ಈ) ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ದಾವೆ ಹೊಡಲಾಗಿದೆ; ಎಷ್ಟು ಪ್ರಕರಣಗಳು ಬಗೆಹರಿದಿವೆ; ಬಾಕಿ ಇರುವ ಪ್ರಕರಣಗಳೆಷ್ಟು;

30 ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ದಾವೆ ಹೂಡಿರುತ್ತದೆ. ಈ ಎಲ್ಲಾ ದಾವೆಗಳು, ವಿಚಾರಣೆಯ ವಿವಿಧ ಹಂತಗಳಲ್ಲಿದ್ದು, ಇನ್ನೂ ಬಾಕಿ ಇರುತ್ತವೆ.

ಉ) ಯಾವ ಕಾಲಮಿತಿಯೊಳಗೆ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗುವುದು